# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1287(1607)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಕಿಯೋನಿಕ್ಸ್ ಸಂಸ್ಥೆಯಿಂದ ವಿತರಿಸಲಾಗುವ ಉಪಕರಣಗಳ ಬಗ್ಗೆ

(ಅ) ರಾಜ್ಯದಲ್ಲಿ 4 ಜಿ ವಿನಾಯಿತಿ ಪಡೆದ ಸಂಸ್ಥೆಗಳು ಯಾವುವು; (ಪಟ್ಟಿ ನೀಡುವುದು)

(ಆ) ಕಿಯೋನಿಕ್ಸ್ ಸಂಸ್ಥೆಯಿಂದ ಇತರೆ ಇಲಾಖೆಗಳಿಗೆ ಒದಗಿಸಲಾಗುತ್ತಿರುವ ಒಟ್ಟು ಸೌಲಭ್ಯಗಳೇನು; ಅವು ಯಾವುವು; (ಸಂಪೂರ್ಣ ವಿವರ ನೀಡುವುದು)

(ಇ) 2015 ರಿಂದ ಇಲ್ಲಿಯವರೆಗೆ ವಿವಿಧ ಇಲಾಖೆಗಳಿಗೆ ಕಿಯೋನಿಕ್ಸ್ ಸಂಸ್ಥೆಯಿಂದ ಒದಗಿಸಲಾಗಿರುವ ಕಂಪ್ಯೂಟರ್, ಪ್ರಿಂಟರ್, ಇನ್ನೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳಿಗೆ ನಿಗದಿಪಡಿಸಿದ ದರ ಹಾಗೂ ಸದರಿ ದರಗಳನ್ನು ಒದಗಿಸಲು ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ; (ಟೆಂಡರ್‌ಗಳ ಮಾಹಿತಿಯೊಂದಿಗೆ ಸಂಪೂರ್ಣವಾದ ವಿವರ ಒದಗಿಸುವುದು)

(ಈ) ಕ್ರೈಸ್ ಸಂಸ್ಥೆಗೆ ಕಿಯೋನಿಕ್ಸ್ ಸಂಸ್ಥೆಯಿಂದ ಒದಗಿಸಲಾಗಿರುವ ಕಂಪ್ಯೂಟರ್ ಎಷ್ಟು; ಅವುಗಳ ಕಾನ್ಫಿಗರೇಷನ್ ಏನು; ಪ್ರಿಂಟರ್, ಇನ್ನೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳ ದರ ಹಾಗೂ ಸದರಿ ದರಗಳನ್ನು ಒದಗಿಸಲು ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ; ಯಾವ ಯಾವ ಕಂಪನಿಗೆ ಒದಗಿಸಲಾಗಿದೆ? (ಸಂಪೂರ್ಣವಾದ ವಿವರ ಒದಗಿಸುವುದು)